**ಓ.ಎಸ್. ನಂಃ 140/2020**

**ಪಿ.ಡಬ್ಲ್ಯೂಃ 1**

**ದಿನಾಂಕ 18.02.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರಃ ಶ್ರೀ ಪಿ.ಡಿ ವಕೀಲರಿಂದಃ**

1. ನನ್ನ ತಂದೆಯ ತಂದೆ ಅಂದರೆ ನನ್ನ ತಾತನ ಹೆಸರು ತಿಮ್ಮೇಗೌಡ ಅಂತ ಇರುತ್ತದೆ. ನನ್ನ ತಾತನಾದ ತಿಮ್ಮೇಗೌಡರಿಗೆ ಒಟ್ಟು 4 ಜನ ಮಕ್ಕಳು. ಅವರ ಹೆಸರು ತಿಮ್ಮೇಗೌಡ, ಕರೀಗೌಡ, ನನ್ನ ತಂದೆಯಾದ ಹುಚ್ಚೇಗೌಡ ಹಾಗೂ ಸಣ್ಣೇಗೌಡ ಅಂತ ಇರುತ್ತದೆ. ಸರ್ವೆ ನಂಬರ್ 23 ರಲ್ಲಿ ನಿಮ್ಮ ತಾತನಾದ ತಿಮ್ಮೇಗೌಡರಿಗೆ ಎಷ್ಟು ಜಮೀನು ಇದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸರ್ವೆ ನಂಬರ್ 22 ಮತ್ತು ಸರ್ವೆ ನಂಬರ್ 23 ರಲ್ಲಿ ಒಟ್ಟು 10 ಎಕರೆ 30 ಗುಂಟೆ ಇರುತ್ತದೆ ಎಂದು ನುಡಿದಿರುತ್ತಾರೆ.

2. ಸರ್ವೆ ನಂಬರ್ 22 ಮತ್ತು ಸರ್ವೆ ನಂಬರ್ 23 ರಲ್ಲಿ ನನ್ನ ತಾತನನಿಗೆ ಒಟ್ಟು 10 ಎಕರೆ 30 ಗುಂಟೆ ಇರುತ್ತದೆ ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸರ್ವೆ ನಂಬರ್ 22 ಮತ್ತು ಸರ್ವೆ ನಂಬರ್ 23 ರಲ್ಲಿ ನನ್ನ ತಾತನಿಗೆ ಇದ್ದ 10 ಎಕರೆ 30 ಗುಂಟೆ ಜಮೀನನ್ನು ಅವರ 4 ಜನ ಮಕ್ಕಳು ನಾನು ಜನಿಸುವ ಪೂರ್ವದಲ್ಲಿಯೇ ಪಾಲು ವಿಭಜನೆ ಮಾಡಿಕೊಂಡಿರುತ್ತಾರೆ. ಸದರಿ ಪಾಲುವಿಭಜನೆಯಲ್ಲಿ ತಿಮ್ಮೇಗೌಡರ ಯಾವ ಮಕ್ಕಳಿಗೆ ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ವಿಸ್ತೀರ್ಣದ ಆಸ್ತಿ ಅವರವರ ಹಿಸ್ಸೆಗೆ ಹೋಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

3. ಸರ್ವೆ ನಂಬರ್ 23 ರಲ್ಲಿ 2 ಎಕರೆ 6 ಗುಂಟೆ ಜಮೀನನ್ನು ನನ್ನ ತಂದೆಯಾದ ಹುಚ್ಚೇಗೌಡ ಹಾಗೂ ನನ್ನ ಚಿಕ್ಕಪ್ಪನಾದ ಸಣ್ಣೇಗೌಡ ಇವರಿಬ್ಬರೂ ತಿಮ್ಮಮ್ಮ ಕೋಂ ಬಸವೇಗೌಡ ಎನ್ನುವವರಿಗೆ ದಿನಾಂಕ 12.10.1981 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

4. ಅದೇ ರೀತಿ ಸರ್ವೆ ನಂಬರ್ 22/4 ರಲ್ಲಿ 7 ಗುಂಟೆ ಜಮೀನನ್ನು ನನ್ನ ತಂದೆಯವರಾದ ಹುಚ್ಚೇಗೌಡರು ದಿನಾಂಕ 13.05.1983 ರ ಸಾಮಾನ್ಯ ಅಧಿಕಾರ

ಪತ್ರದ ಮೂಲಕ ಸದರಿ ತಿಮ್ಮಮ್ಮ ಕೋಂ ಬಸವೇಗೌಡರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ತಾವು ಸರ್ವೆ ನಂಬರ್ 22 ಮತ್ತು ಸರ್ವೆ ನಂಬರ್ 23 ರಲ್ಲಿ ಮೇಲೆ ಹೇಳಿದಂತೆ ಖರೀದಿಸಿದ್ದ 2 ಎಕರೆ 13 ಗುಂಟೆ ಜಮೀನನ್ನು ಪ್ರತಿವಾದಿಯ ತಾಯಿಯಾದ ನಿಂಗಮ್ಮ ಕೋಂ ಜವರನಾಯಕರವರಿಗೆ ದಿನಾಂಕ 22.09.1999 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

5. ಮೇಲೆ ಹೇಳಿದ ಸದರಿ ಖರೀದಿ ವ್ಯವಹಾರಗಳು ನನ್ನ ತಂದೆಯವರು ಮಾಡಿರುವುದರಿಂದ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನ್ನ ತಂದೆಯ ಹಿಸ್ಸೆಗೆ ಬಂದಿತ್ತು ಎಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯ ಚೆಕ್ಕುಬಂದಿಯು ವಾದಪತ್ರದ ಅನುಸೂಚಿಯಲ್ಲಿ ಬರೆಸಿರುವಂತೆ ಇರುತ್ತದೆ ಎಂದು ತೋರಿಸಲು ನಾನು ನನ್ನ ತಂದೆಯವರು ಮಾಡಿಕೊಟ್ಟಿರುವ ಬೋಗ್ಯಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

6. ಸರ್ವೆ ನಂಬರ್ 23 ರಲ್ಲಿ ಒಟ್ಟು 3 ಪೋಡುಗಳಿರುತ್ತವೆ. ಸರ್ವೆ ನಂಬರ್ 23 ರಲ್ಲಿ ಒಟ್ಟು 16 ಪೋಡುಗಳಿವೆ ಎಂದರೆ ಸರಿ. ದಾವಾ ಆಸ್ತಿಯ ಯಾವ ದಿಕ್ಕಿನಲ್ಲಿಯೂ ಸಹ ಪ್ರತಿವಾದಿಯ ಆಸ್ತಿ ಇರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ದಾವಾ ಆಸ್ತಿಯ ಚೆಕ್ಕುಬಂದಿ ಪೂರ್ವಕ್ಕೆ ನನ್ನ ಜಮೀನು, ಪಶ್ಚಿಮಕ್ಕೆ ಹಳ್ಳಿ ಮೈಸೂರು–ಹೊಳೆನರಸೀಪುರ ರಸ್ತೆ, ಉತ್ತರಕ್ಕೆ ತಂದ್ರೆಕೊಪ್ಪಲಿಗೆ ಹೋಗುವ ರಸ್ತೆ, ದಕ್ಷಿಣಕ್ಕೆ ಸಣ್ಣಮ್ಮ ಮತ್ತು ಸುಬ್ಬೇಗೌಡರ ಜಮೀನು ಇರುತ್ತದೆ. ದಾವಾ ಆಸ್ತಿಯ ಯಾವ ದಿಕ್ಕಿನಲ್ಲಿಯೂ ಸಹ ಪ್ರತಿವಾದಿಯ ಆಸ್ತಿ ಇರುವುದಿಲ್ಲ ಎಂದರೆ ಸರಿ.

7. ದಾವಾ ಆಸ್ತಿಯ ಪೂರ್ವದಿಕ್ಕಿನಿಂದ ವಾದಿಯು ನನಗೆ ತೊಂದರೆ ಕೊಡುತ್ತಿದ್ದ ಕಾರಣ ನಾನು ಈ ದಾವೆಯನ್ನು ವಾದಿಯ ವಿರುದ್ಧ ಹೂಡಿರುತ್ತೇನೆ. ದಾವಾ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಪ್ರತಿವಾದಿಗೆ ಸೇರಿದ ಸರ್ವೆ ನಂಬರ್ 22/3 ಅಥವಾ 22/4 ರ ಜಮೀನು ಇದೆ. ದಾವಾ ಆಸ್ತಿಗೂ ಮತ್ತು ಪ್ರತಿವಾದಿಯ ಸರ್ವೆ ನಂಬರ್ 23/10 ರ 18 ಗುಂಟೆ ಜಮೀನಿನ ಮಧ್ಯೆ ಸುಮಾರು 300 ಮೀಟರ್ ನ ಅಂತರವಿದೆ. ದಾವಾ ಆಸ್ತಿ ಮತ್ತು ಪ್ರತಿವಾದಿಯ ಸರ್ವೆ ನಂಬರ್ 23/10 ರ ಆಸ್ತಿಯ ಮಧ್ಯೆ ಬೇರೆಯವರ

ಜಮೀನುಗಳು ಇವೆ ಎಂದರೆ ಸರಿ. ದಾವಾ ಆಸ್ತಿ ಮತ್ತು ಸರ್ವೆ ನಂಬರ್ 23/10 ರ ಆಸ್ತಿಯ ಮಧ್ಯೆ ದೇವೆಗೌಡ ಮತ್ತು ನಿಂಗೇಗೌಡರ ಜಮೀನು ಇದೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**